# ಸರ್ಕಾರಿ ವೈದ್ಯರಿಗೆ 65 ವರ್ಷದವರೆಗೆ ಕೆಲಸ

## ■ 60ಕ್ಕೆ ನಿವೃತ್ತಿಯಾದರೂ ಇನ್ನೈದು ವರ್ಷ ಕೆಲಸ ಮಾಡಬಹುದು ■ ಕಡ್ಡಾಯವಲ್ಲ, ಐಚ್ಛಿಕ: ಸಂಪುಟ ತೀರ್ಮಾನ

ಬೆಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು 60 ವರ್ಷಕ್ಕೆ ನಿವೃತ್ತರಾದರೂ 65 ವರ್ಷದವರೆಗೆ ಅವರು ತಮ್ಮ ಸೇವೆ ಮುಂದುವರಿಸಬಹುದು. ಅಲೋಪತಿಯಷ್ಟೇ ಅಲ್ಲ, ಯುನಾನಿ ಹಾಗೂ ಆಯುಷ್ ವೈದ್ಯರಿಗೂ ಇದು ಅನ್ವಯವಾಗುತ್ತದೆ.

ಹೌದು, ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರಿ ವೈದ್ಯರ ಸೇವೆಯನ್ನು ಅವರು 65 ವರ್ಷ ತುಂಬುವವರೆಗೆ ಬಳಸಿಕೊಳ್ಳಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಸಂಪುಟ ಸಭೆಯ ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು. ಕೇಂದ್ರ ಸರ್ಕಾರವು 2016-17ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರಿ ವೈದ್ಯರ ಸೇವೆಯನ್ನು 65 ವರ್ಷದವರೆಗೆ ಮುಂದುವರಿಸಲು ಅವಕಾಶ ಮಾಡಿಕೊಡುವುದಾಗಿ ಘೋಷಿಸಿತ್ತು. ಅದೇ ರೀತಿ ರಾಜ್ಯದಲ್ಲೂ ವೈದ್ಯರ ಕೊರತೆ ನೀಗಿಸುವ ದೃಷ್ಟಿಯಿಂದ ಈ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ.

ಹಾಗೆಂದು ಇದು ಕಡ್ಡಾಯವೇನೂ ಅಲ್ಲ, ವೈದ್ಯರು ಸೇವೆ ಮುಂದುವರಿಸಲು ಒಪ್ಪಿಗೆ ಸೂಚಿಸಿದರೆ ಮಾತ್ರ ಸರ್ಕಾರ ಅವರ ಸೇವೆ ಬಳಸಿಕೊಳ್ಳುತ್ತದೆ. ಜತೆಗೆ ಅವರ ಆರೋಗ್ಯ ಅದಕ್ಕೆ ಸಹಕರಿಸಬೇಕು. ಸೇವೆಯಲ್ಲಿ ಮುಂದುವರಿಯಲು ಒಪ್ಪುವ ವೈದ್ಯರ ಆರೋಗ್ಯ ಸರಿ ಇದ್ದರೆ ಮಾತ್ರ ಅವಕಾಶ ಮಾಡಿಕೊಡಲಾಗುತ್ತದೆ. ಈ ರೀತಿ ಸೇವೆ ಮುಂದುವರಿಯಲು ಒಪ್ಪುವ ವೈದ್ಯರಿಗೆ ಸೇವಾ ಕ್ಷೇತ್ರದಲ್ಲಿ ಮಾತ್ರ ಅವಕಾಶವಿರುತ್ತದೆ. ಯಾವುದೇ ಆಡಳಿತಾತ್ಮಕ ಹುದ್ದೆಗಳು ಲಭ್ಯವಿರುವುದಿಲ್ಲ. ಅದೇ ರೀತಿ ಪ್ರತಿ ವರ್ಷ ಅವರ ಒಪ್ಪಿಗೆ ಮೇರೆಗೆ ಗುತ್ತಿಗೆ ಅವಧಿ ವಿಸ್ತರಿಸಲಾಗುತ್ತದೆ. ವೇತನ ಪಾವತಿಸುವ ಸಂದರ್ಭದಲ್ಲಿ ಅವರ ನಿವೃತ್ತಿ ವೇತನದ ಭಾಗವನ್ನು ಕಳೆದು ಉಳಿದ ಮೊತ್ತವನ್ನು ಪಾವತಿಸಲಾಗುತ್ತದೆ.

ಪ್ರಸ್ತುತ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 1900 ವೈದ್ಯರ ಕೊರತೆಯಿದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಸಾಕಷ್ಟು ಕ್ರಮ ಕೈಗೊಂಡರೂ ವೈದ್ಯರು ಸರ್ಕಾರಿ ಸೇವೆಗೆ ಮುಂದಾಗುತ್ತಿಲ್ಲ. ಹೀಗಾಗಿ ಕೊರತೆ ನೀಗಿಸುವ ಉದ್ದೇಶದಿಂದ ಈ ತೀರ್ಮಾನಕ್ಕೆ ಬರಲಾಗಿದೆ. ಅಲ್ಲದೆ, ಇದರಿಂದ ನುರಿತ ವೈದ್ಯರ ಸೇವೆ ಸಾರ್ವಜನಿಕರಿಗೆ ಲಭ್ಯವಾದಂತಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರ ಸರ್ಕಾರಿ ವೈದ್ಯರಿಗೆ 65 ವರ್ಷದವರೆಗೆ ಸೇವೆ ಮುಂದುವರಿಸಲು ಅವಕಾಶ ಮಾಡಿಕೊಟ್ಟಿದೆ.

## ಶಿವನಸಮುದ್ರ ವಿದ್ಯುತ್ ಯೋಜನೆಗೆ ಒಪ್ಪಿಗೆ



ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮೂಲಕ ಶಿವನಸಮುದ್ರ ಬಳಿ 200 ಮೆಗಾವ್ಯಾಟ್ ಸಾಮರ್ಥ್ಯದ ನದಿ ಹರಿವು ವಿದ್ಯುತ್ ಯೋಜನೆಯನ್ನು ಜಾರಿಗೊಳಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಶಿವನಸಮುದ್ರ ನದಿ ಹರಿವು ವಿದ್ಯುತ್ ಯೋಜನೆಯ ಭೂಗರ್ಭ ವಿದ್ಯುದಾಗಾರದಲ್ಲಿ 100 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಈ ಹಿಂದೆಯೇ ಇತ್ತಾದರೂ ಇದು ಅಂತಾರಾಜ್ಯ ನದಿ ನೀರು ಹಂಚಿಕೆ ವ್ಯಾಪ್ತಿಗೆ ಬರುವುದರಿಂದ ಕೆಲವು ಸಮಸ್ಯೆಗಳು ಎದುರಾಗಿದ್ದವು. ಕಾವೇರಿ ನದಿಯಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳುವುದರಿಂದ ಆ ಕುರಿತು ಕಾವೇರಿ ನದಿ ನೀರು ಮೇಲುಸ್ತುವಾರಿ ಸಮಿತಿ, ತಮಿಳುನಾಡು ಮತ್ತು ಪಾಂಡಿಚೇರಿ ರಾಜ್ಯಗಳಿಗೆ ಮಾಹಿತಿ ನೀಡಿ ಅದರ ಒಪ್ಪಿಗೆ ಪಡೆದುಕೊಳ್ಳಬೇಕೇ ಎಂಬ ಪ್ರಶ್ನೆ ಎದುರಾಗಿತ್ತು. ಈ ಹಿನ್ನೆಲೆಯಲ್ಲಿ ಅಡ್ವೋಕೇಟ್ ಜನರಲ್ ಅಭಿಪ್ರಾಯ ಕೇಳಿದಾಗ, ವಿದ್ಯುತ್ ಉತ್ಪಾದನೆಗೆ ಬಳಸುವ ನೀರು ಮತ್ತೆ ನದಿಗೆ ಹೋಗುವುದರಿಂದ ಅನುಮತಿ ಅಗತ್ಯವಿಲ್ಲ, ಆದರೆ, ಮಾಹಿತಿ ನೀಡಬೇಕು ಎಂದು ಹೇಳಿದ್ದರು. ಅದರಂತೆ ಮೇಲುಸ್ತುವಾರಿ ಸಮಿತಿ ಮತ್ತು ಎರಡೂ ರಾಜ್ಯಗಳಿಗೆ ಮಾಹಿತಿ ನೀಡಿ ಯೋಜನೆ ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅನುಮತಿ ನೀಡಲಾಗಿದೆ.

## ಇತರೆ ಪ್ರಮುಖ ತೀರ್ಮಾನಗಳು

1 ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಆವರಣದಲ್ಲಿ 2017-18ನೇ ಸಾಲಿನಿಂದ ಕೇಂದ್ರ ಸರ್ಕಾರ ಮತ್ತು ಭಾರತೀಯ ವೈದ್ಯಕೀಯ ಮಂಡಳಿಯ ಅನುಮತಿ ಪಡೆದು ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಿಂದ 150 ಸೀಟುಗಳ ಹೊಸ ವೈದ್ಯಕೀಯ ಕಾಲೇಜು ಆರಂಭ.

2 ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ 14.90 ಕೋಟಿ ರೂ. ಸಾಲ ಪಡೆಯಲು ಸರ್ಕಾರಿ ಖಾತರಿ ನೀಡುವುದು.

3 ಕೊಡಗು ಜಿಲ್ಲೆ ಭಾಗಮಂಡಲ ಹೋಬಳಿ ಕೋರಂಗಾಲ ಗ್ರಾಮದಲ್ಲಿ 17.10 ಕೋಟಿ ರೂ. ವೆಚ್ಚದಲ್ಲಿ ಹಿಂದುಳಿದ ವರ್ಗದ ಅಟಲ್‌ಬಿಹಾರಿ ವಾಜಪೇಯಿ ವಸತಿ ಶಾಲಾ ಸಂಕೀರ್ಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ.

4 ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಯಡ್ಯಾಡಿ-ಮತ್ಯಾಡಿ ಗ್ರಾಮದಲ್ಲಿ 16.37 ಕೋಟಿ ರೂ. ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣ ನಿರ್ಮಾಣಕ್ಕೆ ಆಡಳಿತಾತ್ಮಕ ಒಪ್ಪಿಗೆ.

5 ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಗೊಳಿಹೊನ್ನೇನಹಳ್ಳಿ ಗ್ರಾಮದಲ್ಲಿ 14.58 ಕೋಟಿ ರೂ. ವೆಚ್ಚದಲ್ಲಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ.

## ಚಿಕ್ಕಮಗಳೂರು: ಕಳಸಾಪುರ ಕೊಟ್ಟಿಗೆಗೆ ವಿದ್ಯುತ್ ಸ್ಪರ್ಶ, 4 ಜಾನುವಾರು ದಹನ

₹600-700 ಕೋಟಿ ನಷ್ಟದಲ್ಲಿ ಎಂಪಿಎಂ ಕಾರ್ಖಾನೆ । ನೌಕರರ ಸ್ವಯಂ ನಿವೃತ್ತಿಗೆ ₹396 ಕೋಟಿ ವಿಶೇಷ ಪ್ಯಾಕೇಜ್

HD 8/12/16

# ಮುಚ್ಚಲಿರುವ ಭದ್ರಾವತಿ ಕಾಗದ ಕಾರ್ಖಾನೆ

**ಬೆಂಗಳೂರು:** ಭದ್ರಾವತಿ ಕಾಗದ ಕಾರ್ಖಾನೆಯ 2100 ನೌಕರರಿಗೆ ಸ್ವಯಂ ನಿವೃತ್ತಿ ನೀಡಲು 396 ಕೋಟಿ ವಿಶೇಷ ಪ್ಯಾಕೇಜ್ ಹಾಗೂ 60 ವರ್ಷಕ್ಕೆ ನಿವೃತ್ತಿ ಪಡೆದ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ಐದು ವರ್ಷ ಸೇವೆ ಮುಂದುವರಿಸುವ ಮಹತ್ವದ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ನಂತರ ಕಾನೂನು ಸಚಿವ ಟಿ.ಬಿ.ಜಯಚಂದ್ರ ವಿವರ ನೀಡಿದರು.

ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಎಂಪಿಎಂ ಕಾರ್ಖಾನೆ ಈಗಾಗಲೇ 600–700 ಕೋಟಿ ರೂ. ನಷ್ಟದಲ್ಲಿದೆ. ಅಲ್ಲದೆ ಈ ಕಾರ್ಖಾನೆ ಮುನ್ನಡೆಸಲು ಖಾಸಗಿಯವರು ಮುಂದೆ ಬರುತ್ತಿಲ್ಲ. ಹೀಗಾಗಿ 2100 ಕಾರ್ಮಿಕರಿಗೆ ಸ್ವಯಂ ನಿವೃತ್ತಿಗೆ ತೀರ್ಮಾನಿಸಿ 396.72 ಕೋಟಿ ರೂ.ವಿಶೇಷ ಪ್ಯಾಕೇಜ್ ನೀಡಲು ಸಂಪುಟ ಒಪ್ಪಿದೆ ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ 60 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ವೈದ್ಯಾಧಿಕಾರಿಗಳನ್ನು ಪುನಃ ಸೇವೆಯಲ್ಲಿ ವಿಸ್ತರಣೆ ಮಾಡಲು ತೀರ್ಮಾನಿಸಲಾಗಿದೆ. ಇಂತಹವರನ್ನು 5 ವರ್ಷದವರೆಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿ ಕೊಳ್ಳಲಾಗುತ್ತದೆ ಎಂದರು.



**200 ಮೆಗಾವ್ಯಾಟ್ ವಿದ್ಯುತ್**

ಕಾವೇರಿಕೊಳ್ಳದ ಶಿವನಸಮುದ್ರ ತಿರುವು ಯೋಜನೆಯಡಿ 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಸರ್ಕಾರ ಅಸ್ತು ಎಂದಿದೆ. ಈ ಜಲವಿವಾದ ಸಂಬಂಧ ಅಡ್ವೊಕೇಟ್ ಜನರಲ್ ಅವರ ಸಲಹೆಯಂತೆ ತಮಿಳುನಾಡು ಸರ್ಕಾರಕ್ಕೆ ಯೋಜನೆಯ ಮಾಹಿತಿ ನೀಡಲು ತೀರ್ಮಾನಿಸಲಾಗಿದೆ.

ಹೈಕೋರ್ಟ್ ಅಧಿಕಾರಿಗಳು ಹಾಗೂ ನೌಕರರಿಗೆ ಕೇಂದ್ರದ ವೇತನ ಶ್ರೇಣಿ ನೀಡಬೇಕೆಂಬ ಪ್ರಸ್ತಾವನೆಯನ್ನು ಸರ್ಕಾರ ತಳ್ಳಿಹಾಕಿದೆ. ಇದರಿಂದಾಗಿ ರಾಜ್ಯ ಸರ್ಕಾರದ ವೇತನ ಶ್ರೇಣಿಯೇ ಮುಂದುವರಿಯಲಿದೆ. ಈ ವಿಚಾರವನ್ನು ರಾಜ್ಯಪಾಲರ ಪ್ರಸ್ತಾವನೆಗೆ ಕಳುಹಿಸಲಾಗುವುದು ಎಂದರು.

**ತಿದ್ದುಪಡಿ ವಿಧೇಯಕ**

ನಗರಾಭಿವೃದ್ಧಿ ಇಲಾಖೆಯ ಸರ್ಕಾರಿ ಹಾಗೂ ಖಾಸಗಿ ಬಡಾವಣೆ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಿಸಿದಂತೆ ಉದ್ಯಾನವನಕ್ಕೆ ಶೇ.10ರಷ್ಟು ಜಾಗ ಮೀಸಲಿಡುವ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ. ಈ ಹಿಂದೆ ಖಾಸಗಿಯವರಿಗೆ ಶೇ.10 ಹಾಗೂ ಸರ್ಕಾರಿ ಬಡಾವಣೆಗಳಿಗೆ ಶೇ.15 ರಷ್ಟು ಉದ್ಯಾನವನಕ್ಕೆ ಮೀಸಲಿಡಬೇಕೆಂಬ ಕಾಯ್ದೆ ಇತ್ತು. ಈ ತಿದ್ದುಪಡಿ ವಿಧೇಯಕವನ್ನು ರಾಜ್ಯಪಾಲರು ವಿರೋಧ ವ್ಯಕ್ತಪಡಿಸಿ ವಾಪಾಸ್ ಕಳುಹಿಸಿದರಲ್ಲದೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನಲೆಯಲ್ಲಿ ಖಾಸಗಿ ಹಾಗೂ ಸರ್ಕಾರಿ ಬಡಾವಣೆಗೆ ಶೇ.10ರಷ್ಟು ಮೀಸಲಿಡಬೇಕೆಂದು ತೀರ್ಮಾನಿಸಲಾಗಿದೆ. ಇದನ್ನು ತಿದ್ದುಪಡಿ ವಿಚಾರವನ್ನು ರಾಜ್ಯಪಾಲರಿಗೆ ಕಳುಹಿಸಲು ನಿರ್ಧರಿಸಲಾಗಿದೆ ಎಂದರು.

## ಹೊಸ ವೈದ್ಯ ಕಾಲೇಜು

ಬೌರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ 2018–19 ನೇ ಸಾಲಿನಲ್ಲಿ ಹೊಸ ವೈದ್ಯ ಕಾಲೇಜು ಸ್ಥಾಪನೆಗೆ ಅಸ್ತು ಎಂದಿದ್ದು, ಇದಕ್ಕಾಗಿ ಕೇಂದ್ರ ಹಾಗೂ ಭಾರತೀಯ ವೈದ್ಯ ಪರಿಷತ್ತಿಗೆ ಅರ್ಜಿ ಸಲ್ಲಿಸಲು ಸರ್ಕಾರ ಒಪ್ಪಿಗೆ ಸೂಚಿಸಿದೆ. ವಕೀಲರ ಕಲ್ಯಾಣಾಭಿವೃದ್ಧಿಗಾಗಿ ಮೀಸಲಿಡುವ ಹಣದಲ್ಲಿ ನಿವೃತ್ತಿ ಹಾಗೂ ಅಪಘಾತಕ್ಕೆ ಸಂಬಂಧಿಸಿದ ಅನುದಾನ ಹೆಚ್ಚಳ ಮಾಡುವ ಸಂಬಂಧ ಕಾಯ್ದೆ ತಿದ್ದುಪಡಿ ಮಾಡಲು ತೀರ್ಮಾನಿಸಲಾಗಿದೆ. ಇದರಿಂದಾಗಿ 15 ವರ್ಷ ವಕೀಲರಾಗಿ ಸೇವೆ ಸಲ್ಲಿಸಿದವರಿಗೆ 2 ರಿಂದ 4 ಲಕ್ಷ, 15 ರಿಂದ 35 ವರ್ಷ ಸೇವೆ ಸಲ್ಲಿಸಿದವರಿಗೆ 3 ರಿಂದ 6 ಹಾಗೂ 35ಕ್ಕೂ ಹೆಚ್ಚು ಸೇವೆ ಸಲ್ಲಿಸಿದವರಿಗೆ 4 ರಿಂದ 8 ಲಕ್ಷ ರೂಪಾಯಿಗೆ ವಿಮೆ ಹಣ ಏರಿಕೆಯಾಗಿದೆ.

## ನೈಸ್ ಹಾಗೂ ಎಂಎಂಎಲ್

ನೈಸ್ ವಿಚಾರ ಸಂಬಂಧ ಸದನ ಸಮಿತಿ ವರದಿ ಚರ್ಚೆಯಾಗಿದ್ದರೂ, ಎಲ್ಲಾ ಇಲಾಖೆಗಳು ವರದಿಯನ್ನು ಪರಿಶೀಲಿಸಬೇಕಿದೆ. ಆನಂತರ ಕ್ರಮ ಕೈಗೊಳ್ಳಬೇಕಿದೆ. ಇಲಾಖೆಗಳು ಪರಿಶೀಲಿಸಿದ ವರದಿ ಮುಖ್ಯ ಕಾರ್ಯದರ್ಶಿಗೆ ಬಂದ ನಂತರ ಸಚಿವ ಸಂಪುಟಕ್ಕೆ ಬರಲಿದೆ ಎಂದರು. ಇದಲ್ಲದೆ ಎಂಎಂಎಲ್ ಕ್ರಮ ಸಂಬಂಧ ಲೋಕಾಯುಕ್ತ ವರದಿಯಲ್ಲಿನ ವಿಚಾರ ಕುರಿತಂತೆ ಸಂಪುಟ ಸಭೆಯಲ್ಲಿ ಸುಮಾರು 2 ಗಂಟೆ ಚರ್ಚಿಸಲಾಯಿತಾದರೂ ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಅಲ್ಲದೆ ಪ್ರಭಾವಿ ಸಚಿವರ ಭಾಗಿಯಾಗಿದ್ದರೆಂದು ವರದಿಯಲ್ಲಿ ಉಲ್ಲೇಖವಿದೆ. ಈ ವರದಿಯನ್ನು ಮರುಪರಿಶೀಲಿಸುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕಳುಹಿಸಲು ನಿರ್ಧರಿಸಲಾಗಿದೆ ಎನ್ನಲಾಗಿದೆ.

### ಶೇ 15 ರಿಂದ ಶೇ10ಕ್ಕೆ ಇಳಿಕೆ: ಹಿಂದಿನ ನಿರ್ಧಾರಕ್ಕೆ ಕಟ್ಟುಬಿದ್ದ ರಾಜ್ಯ ಸರ್ಕಾರ

# ಪ್ರಾಧಿಕಾರದ ಬಡಾವಣೆಗಳಲ್ಲಿ ಉದ್ಯಾನ ಜಾಗಕ್ಕೆ ಕತ್ತರಿ

ಬೆಂಗಳೂರು: ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸುವ ಬಡಾವಣೆಗಳಲ್ಲಿ ಉದ್ಯಾನ ಹಾಗೂ ಆಟದ ಮೈದಾನಕ್ಕೆ ಮೀಸಲಿಡಬೇಕಾದ ಜಾಗವನ್ನು ಶೇ 15 ರಿಂದ ಶೇ10ಕ್ಕೆ ಇಳಿಸುವ ನಿರ್ಧಾರಕ್ಕೆ ಬದ್ಧವಾಗಿರಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ರಾಜ್ಯಪಾಲರು ವಾಪಸ್ ಕಳಿಸಿದ್ದ ತಿದ್ದುಪಡಿ ಮಸೂದೆ ಪುನಃ ಸಚಿವ ಸಂಪುಟ ಸಭೆಯಲ್ಲಿ ಮಂಡನೆಯಾಗಿ ವಿಸ್ತೃತ ಚರ್ಚೆ ನಡೆಯಿತು. ಹಿಂದೆ ತೆಗೆದುಕೊಂಡಿದ್ದ ನಿಲುವಿಗೆ ಬದ್ಧವಾಗಿರಲು ಸಚಿವ ಸಂಪುಟ ಸಭೆ ನಿರ್ಧರಿಸಿತು ಎಂದು ಸಭೆ ಬಳಿಕ ಕಾನೂನು ಸಚಿವ ಟಿ.ಬಿ. ಜಯಚಂದ್ರ ಅವರು ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಪ್ರಾಧಿಕಾರದ ಬಡಾವಣೆಗಳಲ್ಲಿ ಮುಕ್ತ ಪ್ರದೇಶಕ್ಕೆ (ಓಪನ್ ಸ್ಪೇಸ್) ಮೀಸಲಿಡಬೇಕಾದ ಪ್ರಮಾಣ ಶೇ 15ರಷ್ಟಿತ್ತು. ಖಾಸಗಿ ಬಡಾವಣೆಗಳಲ್ಲಿ ಈ ಪ್ರಮಾಣ ಶೇ 10 ರಷ್ಟಿತ್ತು. ಮುಕ್ತ ಪ್ರದೇಶ ಹೆಚ್ಚು ಪ್ರಮಾಣದಲ್ಲಿ ಮೀಸಲಿಡಬೇಕಾಗಿದ್ದರಿಂದಾಗಿ ಪ್ರಾಧಿಕಾರಗಳಿಗೆ ನಷ್ಟ ಉಂಟಾಗುತ್ತಿತ್ತು. ಇದನ್ನು ತಪ್ಪಿಸಲು ತಿದ್ದುಪಡಿ ಮಸೂದೆ ತಂದು, ವಿಧಾನಮಂಡಲದ ಅನುಮೋದನೆ ಪಡೆಯಲಾಗಿತ್ತು. ಅದೇ ಮಸೂದೆಯನ್ನು ಮತ್ತೊಮ್ಮೆ ವಿಧಾನ ಮಂಡಲದ ಮುಂದೆ ಮಂಡಿಸಿ, ಒಪ್ಪಿಗೆ ಪಡೆಯಲು ಸಭೆ ನಿರ್ಧರಿಸಿತು ಎಂದರು.

**ಮಸೂದೆಗೆ ಆಕ್ಷೇಪ:** ಈ ಸಂಬಂಧ ರಾಜ್ಯ ಸರ್ಕಾರ 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಕಾಯ್ದೆ–1978'ಕ್ಕೆ ತಿದ್ದುಪಡಿ ತರಲು ಕಳೆದ ಜುಲೈನಲ್ಲಿ ಮಸೂದೆಯನ್ನು ಮಂಡಿಸಿತ್ತು. ಉದ್ಯಾನ ಮತ್ತು ಆಟದ ಮೈದಾನಕ್ಕೆ ಮೀಸಲಿಡಬೇಕಾದ ಜಾಗವನ್ನು ಶೇ 15ರಿಂದ ಶೇ 10ಕ್ಕೆ ಹಾಗೂ ನಾಗರಿಕ ಸೌಲಭ್ಯದ ಉದ್ದೇಶಕ್ಕೆ ಮೀಸಲಿಡಬೇಕಾದ ಪ್ರದೇಶವನ್ನು ಶೇ 10 ರಿಂದ 5ಕ್ಕೆ ಇಳಿಸಲು ಮಸೂದೆ ಅವಕಾಶ ಕಲ್ಪಿಸಿತ್ತು. ಅಧಿವೇಶನದಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸುತ್ತಿದ್ದಾಗ, ರಾಜ್ಯ ಸರ್ಕಾರ ಅನುಮೋದನೆ ಪಡೆದಿತ್ತು. ಈ ಬಗ್ಗೆ ನಾಗರಿಕ ಸಂಸ್ಥೆಗಳು ಹಾಗೂ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ರಾಜ್ಯಪಾಲರನ್ನು ಭೇಟಿ ಮಾಡಿದ್ದ ಬಿಜೆಪಿಯ ನಾಯಕರು ತಿದ್ದುಪಡಿ ಮಸೂದೆಗೆ ಅಂಗೀಕಾರ ನೀಡದಂತೆ ಆಗ್ರಹಿಸಿದ್ದರು. ಹೀಗಾಗಿ ರಾಜ್ಯಪಾಲ ವಜುಭಾಯಿ ವಾಲಾ ಅವರು ಮಸೂದೆ ವಾಪಸು ಕಳಿಸಿದ್ದರು.

## ಶಿವನಸಮುದ್ರದಲ್ಲಿ 200 ಮೆಗಾವಾಟ್ ವಿದ್ಯುತ್ ಉತ್ಪಾದನೆ

ಕರ್ನಾಟಕ ವಿದ್ಯುತ್ ನಿಗಮವು ಶಿವನಸಮುದ್ರದಲ್ಲಿ ಕಾವೇರಿ ನದಿ ನೀರು ಬಳಸಿ 200 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ಕುರಿತು ಕಾವೇರಿ ಮೇಲುಸ್ತುವಾರಿ ಸಮಿತಿ ಹಾಗೂ ತಮಿಳುನಾಡು ಸರ್ಕಾರದ ಗಮನಕ್ಕೆ ತರಲು ಸಚಿವ ಸಂಪುಟ ಸಭೆ ನಿರ್ಣಯಿಸಿದೆ.

ರಾಜ್ಯದ ಪಾಲಿನ ನೀರನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡಲು ನದಿ ಪಾತ್ರದ ರಾಜ್ಯಗಳ ಅಭಿಪ್ರಾಯ ಹಾಗೂ ಒಪ್ಪಿಗೆ ಕೇಳಬೇಕಿಲ್ಲ ಎಂದು ಸಚಿವ ಸಂಪುಟ ಸಭೆಯಲ್ಲಿ ಹಿರಿಯ ಸಚಿವರು ಪ್ರತಿಪಾದಿಸಿದರು. ಆದರೆ, ಅಡ್ವೊಕೇಟ್ ಜನರಲ್ ಅವರ ಸಲಹೆ ಮೇರೆಗೆ, ಯೋಜನೆ ಬಗ್ಗೆ ತಮಿಳುನಾಡಿಗೆ ಮಾಹಿತಿ ನೀಡಲು ಸಭೆ ನಿರ್ಧರಿಸಿತು.

## ಸಂಪುಟದ ಪ್ರಮುಖ ನಿರ್ಣಯಗಳು

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೈದ್ಯಾಧಿಕಾರಿಗಳ ಸೇವೆಯ ನಿವೃತ್ತಿ ವಯಸ್ಸು 60 ಇದ್ದರೂ ಗುತ್ತಿಗೆ ಆಧಾರದ ಮೇಲೆ 65 ವರ್ಷಕ್ಕೆ ಹೆಚ್ಚಿಸಲು ತೀರ್ಮಾನ. ಇವರು ವೈದ್ಯರಾಗಿ ಸೇವೆ ಸಲ್ಲಿಸಬೇಕು.
- ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ 2018–19 ರಿಂದ 150 ವೈದ್ಯಕೀಯ ಸೀಟು ಸಾಮರ್ಥ್ಯದ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಒಪ್ಪಿಗೆ.
- ವಕೀಲರ ಕಲ್ಯಾಣ ನಿಧಿ ಮೊತ್ತವನ್ನು ದುಪ್ಪಟ್ಟು ಮಾಡಲು ಅನುವಾಗುವಂತೆ ಕಾಯ್ದೆಗೆ ತಿದ್ದುಪಡಿ ತರಲು ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ. 15 ವರ್ಷದವರೆಗೆ ಸೇವೆ ಸಲ್ಲಿಸಿದವರಿಗೆ ₹ 2 ಲಕ್ಷದ ಬದಲು ₹ 4 ಲಕ್ಷ, 15 ವರ್ಷದಿಂದ 35 ವರ್ಷದವರೆಗೆ ಸೇವೆ ಸಲ್ಲಿಸಿದವರಿಗೆ ₹3ರ ಬದಲು ₹6 ಲಕ್ಷ ಹಾಗೂ 35ಕ್ಕಿಂತ ಹೆಚ್ಚಿನ ವರ್ಷ ಸೇವೆ ಸಲ್ಲಿಸಿದವರಿಗೆ ₹4 ಲಕ್ಷದ ಬದಲು ₹8 ಲಕ್ಷಕ್ಕೆ ಏರಿಕೆಯಾಗಲಿದೆ.

## ಹೈಕೋರ್ಟ್ ಸಿಬ್ಬಂದಿಗೆ ಕೇಂದ್ರ ವೇತನ ನೀಡಲು ನಕಾರ

ಹೈಕೋರ್ಟ್ ನ ಅಧಿಕಾರಿ ಮತ್ತು ಸಿಬ್ಬಂದಿಗೆ ಕೇಂದ್ರ ವೇತನ ಶ್ರೇಣಿಯ ಬದಲು ರಾಜ್ಯ ಸರ್ಕಾರದ ವೇತನ ಶ್ರೇಣಿಗೆ ಸಮನಾದ ವೇತನ ನೀಡಲು ಸರ್ಕಾರ ನಿರ್ಧರಿಸಿದೆ. ಕೇಂದ್ರ ಸರ್ಕಾರದ ವೇತನ ಶ್ರೇಣಿ ನೀಡುವಂತೆ ಸಚಿವ ಸಂಪುಟದ ಮುಂದೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಆದರೆ, ಅಡ್ವೊಕೇಟ್ ಜನರಲ್ ಅವರು, 'ಪ್ರಸ್ತುತ ಹೈಕೋರ್ಟ್ ಸಿಬ್ಬಂದಿ ರಾಜ್ಯ ಸರ್ಕಾರದ ವೇತನ ಶ್ರೇಣಿಯಲ್ಲಿಯೇ ಇದ್ದಾರೆ. ಅದನ್ನೇ ಮುಂದುವರಿಸುವುದು ಸೂಕ್ತ' ಎಂದು ಸಲಹೆ ನೀಡಿದ್ದರು. ಇದನ್ನು ರಾಜ್ಯಪಾಲರ ಗಮನಕ್ಕೆ ತರಲು ಸಚಿವ ಸಂಪುಟ ತೀರ್ಮಾನಿಸಿದೆ.

---

# ತೆರಿಗೆ ಬಾಕಿ: ಸರ್ಕಾರಿ ಕಚೇರಿಗಳಿಗೆ ನೋಟಿಸ್

ಬೆಂಗಳೂರು: ನಗರದ ವ್ಯಾಪ್ತಿಯಲ್ಲಿರುವ ಎಲ್ಲ ಸರ್ಕಾರಿ ಕಚೇರಿಗಳಿಗೆ ಸೇವಾ ತೆರಿಗೆ ನೀಡುವಂತೆ ನೋಟಿಸ್ ಜಾರಿ ಮಾಡಲು ಬಿಬಿಎಂಪಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಧರಿಸಿದೆ.

ಕಂದಾಯ ಅಧಿಕಾರಿಗಳ ಸಭೆ ನಡೆಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಕೆ. ಗುಣಶೇಖರ್, 'ಎಲ್ಲ ಸರ್ಕಾರಿ ಕಚೇರಿಗಳಿಗೂ ತಕ್ಷಣ ನೋಟಿಸ್ ಜಾರಿ ಮಾಡಬೇಕು' ಎಂದು ಸೂಚನೆ ನೀಡಿದರು.

'ಸರ್ಕಾರಿ ಸಂಸ್ಥೆಗಳಾದ ಜಲಮಂಡಳಿ, ಬಿಡಿಎ, ಬೆಸ್ಕಾಂ, ಕೆಪಿಟಿಸಿಎಲ್ ಹಾಗೂ ಮೆಟ್ರೊ ರೈಲು ನಿಗಮಕ್ಕೂ ನೋಟಿಸ್ ನೀಡಬೇಕು' ಎಂದು ಹೇಳಿದರು. 'ಪ್ರತಿ ವಲಯದಲ್ಲಿ ಹೆಚ್ಚಿನ ತೆರಿಗೆ ಬಾಕಿ ಉಳಿಸಿಕೊಂಡವರ ಪಟ್ಟಿ ಸಿದ್ಧಪಡಿಸಬೇಕು. ಸುಧಾರಣಾ ವೆಚ್ಚವನ್ನೂ ಸಂಗ್ರಹಿಸಬೇಕು' ಎಂದು ತಿಳಿಸಿದರು.

ಯಲಹಂಕ ವಲಯದಲ್ಲಿ ₹ 64 ಕೋಟಿ, ದಾಸರಹಳ್ಳಿ ವಲಯದಲ್ಲಿ ₹ 53 ಕೋಟಿ ತೆರಿಗೆ ಸಂಗ್ರಹ ಬಾಕಿ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, 'ತೆರಿಗೆ ಸಂಗ್ರಹಕ್ಕೆ ವಿಶೇಷ ಅಭಿಯಾನ ನಡೆಸಬೇಕು' ಎಂದು ಹೇಳಿದರು.

---

# ತಾತ್ಕಾಲಿಕ ಪಟ್ಟಿ ಪ್ರಕಟ

2/12/2016

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಿಗೆ ನಡೆದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ತಾತ್ಕಾಲಿಕ ಪಟ್ಟಿ ಪ್ರಕಟಗೊಂಡಿದೆ. ಡಿ.3ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು http://kea.kar.nic.in ವೆಬ್‌ಸೈಟ್‌ನಲ್ಲಿ ಸೋಮವಾರ ಪ್ರಕಟಿಸಲಾಗಿದೆ.

ಸಂಯುಕ್ತ ಕರ್ನಾಟಕ. Page No 10 8/12/16

# ಶಿವನಸಮುದ್ರಂ ವಿದ್ಯುತ್ ಯೋಜನೆಗೆ ಸಮ್ಮತಿ

## 396 ಕೋಟಿ ಪ್ಯಾಕೇಜ್: ಸಚಿವ ಸಂಪುಟ ಒಪ್ಪಿಗೆ

**ಬೆಂಗಳೂರು:** ಈಗಾಗಲೇ ಉತ್ಪಾದನೆ ಸ್ಥಗಿತಗೊಂಡಿರುವ ಮೈಸೂರು ಕಾಗದ ಕಾರ್ಖಾನೆ (ಎಂಪಿಎಂ) ನೌಕರರಿಗೆ ಸರ್ಕಾರ ಸ್ವಯಂ ನಿವೃತ್ತಿ ಪ್ಯಾಕೇಜ್ ಘೋಷಿಸಿದೆ.

ಬುಧವಾರ ಮುಖ್ಯಮಂತ್ರಿ ಸಿದ್ಧರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಈ ಸಂಬಂಧದ ಪ್ರಸ್ತಾವನೆಗೆ ಒಪ್ಪಿಗೆ ನೀಡಿದೆ.

ಒಟ್ಟು 2200 ಮಂದಿ ನೌಕರರ ಸ್ವಯಂ ನಿವೃತ್ತಿಗೆ ಸಂಬಂಧಿಸಿದಂತೆ 396 ಕೋಟಿ ರೂ. ಮೊತ್ತದ ಪ್ಯಾಕೇಜ್ ರೂಪಿಸಲಾಗಿದ್ದು ರಾಜ್ಯ ಸರ್ಕಾರವೇ ಈ ಹಣ ಭರಿಸಲಿದೆ. ಕಾರ್ಖಾನೆ 700 ಕೋಟಿ ರೂ. ನಷ್ಟದಲ್ಲಿದೆ 'ಎಂದು ಸಂಪುಟ ಸಭೆಯ ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಟಿ.ಬಿ.ಜಯಚಂದ್ರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕಳೆದ 8 ತಿಂಗಳಿಂದ ಕಾರ್ಖಾನೆ ನಷ್ಟದಲ್ಲಿದೆ. ಭಾರೀ ನಷ್ಟದ ಕಾರಣ ಖಾಸಗಿಯವರು ವಹಿಸಿಕೊಳ್ಳಲು ಮುಂದೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ,

### ವಿದ್ಯುತ್ ಉತ್ಪಾದನೆ

'ಕಾವೇರಿಕೊಳ್ಳದ ಶಿವನಸಮುದ್ರಂ ಪ್ರದೇಶದಲ್ಲಿ 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಈಗಾಗಲೇ ನಿರ್ಧರಿಸಿರುವ ಸರ್ಕಾರ ಈ ಬಗ್ಗೆ ಮಾಹಿತಿಯನ್ನು ನೆರೆಯ ತಮಿಳುನಾಡು ಜತೆ ಹಂಚಿಕೊಳ್ಳಲು ತೀರ್ಮಾನಿಸಿದೆ.

ಕೇಂದ್ರ ಸರ್ಕಾರ ಹಾಗೂ ತಮಿಳುನಾಡಿಗೆ ಯೋಜನೆಯ ವಿವರವಾದ ಮಾಹಿತಿ ನೀಡಬೇಕು ಎಂದು ಸಂಪುಟ ನಿರ್ಧರಿಸಿದೆ.

### ವೇತನ ಶ್ರೇಣಿ ಇಲ್ಲ

ರಾಜ್ಯ ಹೈಕೋರ್ಟ್‌ನ ಅಧಿಕಾರಿ, ನೌಕರರಿಗೆ ಪ್ರತ್ಯೇಕ ವೇತನ ಶ್ರೇಣಿ ನೀಡದಿರಲು ಸಂಪುಟ ಸಭೆ ತೀರ್ಮಾನಿಸಿದೆ. ಕೇಂದ್ರ ಸರ್ಕಾರದ 6 ನೇ ವೇತನ ಆಯೋಗದ ಶಿಫಾರಸು ಅನ್ವಯಿಸುವುದರಿಂದ ಪ್ರತ್ಯೇಕ ವೇತನ ಶ್ರೇಣಿ ನೀಡುವುದು ಅಗತ್ಯವಿಲ್ಲ ಎನ್ನುವುದು ಸಂಪುಟದ ತೀರ್ಮಾನ.

### ವೈದ್ಯಕೀಯ ಕಾಲೇಜು

ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಹೊಸ ವೈದ್ಯಕೀಯ ಕಾಲೇಜು ಆರಂಭ ಆಗಲಿದೆ. ಇದರಿಂದ 150 ಎಂಬಿಬಿಎಸ್ ಸೀಟುಗಳು ಲಭ್ಯ ಆಗಲಿದೆ ಎಂದು ಸರ್ಕಾರ ಅಂದಾಜು ಮಾಡಿದೆ.

### ಸೌಲಭ್ಯ ಏರಿಕೆ

ಕರ್ನಾಟಕ ವಕೀಲರ ಕಲ್ಯಾಣ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಮೂಲಕ ಅಪಘಾತ ಸಂದರ್ಭದಲ್ಲಿ ಸಿಗುವ ಸೌಲಭ್ಯ ದುಪ್ಪಟ್ಟು ಮಾಡಲು ತೀರ್ಮಾನಿಸಲಾಗಿದೆ.

ಈ ತಿದ್ದುಪಡಿಯಿಂದ 15 ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿದವರು ಅಪಘಾತ ಸಂದರ್ಭದಲ್ಲಿ ಪಡೆಯುತ್ತಿದ್ದ ಪರಿಹಾರ 2 ಲಕ್ಷದಿಂದ 4 ಲಕ್ಷ. 15 ವರ್ಷದಿಂದ 30 ವರ್ಷದೊಳಗಿನವರು 3 ಲಕ್ಷದಿಂದ 6 ಲಕ್ಷ ಹಾಗೂ 35 ವರ್ಷಕ್ಕಿಂತ ಮೇಲ್ಪಟ್ಟವರು 4 ಲಕ್ಷದಿಂದ 8 ಲಕ್ಷದವರೆಗೆ ಪರಿಹಾರ ಪಡೆಯಲಿದ್ದಾರೆ ಎಂದು ಸಚಿವ ಜಯಚಂದ್ರ ತಿಳಿಸಿದರು.

### ಶೇ.10 ಜಾಗ ಮೀಸಲು

ರಾಜ್ಯದಲ್ಲಿ ಖಾಸಗಿ ಹಾಗೂ ಸರ್ಕಾರಿ ಪ್ರಾಧಿಕಾರಗಳು ನಿರ್ಮಿಸುವ ಬಡಾವಣೆಗಳಲ್ಲಿ ಶೇ.10 ರಷ್ಟು ಜಾಗವನ್ನು ಪಾರ್ಕ್ ಸೇರಿದಂತೆ ಸಾರ್ವಜನಿಕ ಬಡಾವಣೆಗೆ ಮೀಸಲಿಡುವುದು ಇನ್ನು ಮುಂದೆ ಕಡ್ಡಾಯ.

ಈ ಸಂಬಂಧ ಸರ್ಕಾರ ಈ ಹಿಂದೆ ಕಳುಹಿಸಿದ್ದ ವಿಧೇಯಕಕ್ಕೆ ರಾಜ್ಯಪಾಲರು ಸಹಕಾರಣ ನೀಡಿ ಅಂಕಿತ ಹಾಕಿರಲಿಲ್ಲ. ರಾಜ್ಯಪಾಲರ ಆಕ್ಷೇಪಣೆ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ಸರ್ಕಾರ ತಂದಿದೆ. ಇನ್ನು ಮುಂದೆ ಖಾಸಗಿ ಹಾಗೂ ಸರ್ಕಾರಿ ಬಡಾವಣೆಗಳಲ್ಲಿ ಶೇ.10 ರಷ್ಟು ಜಾಗ ಸಾರ್ವಜನಿಕ ಬಳಕೆಗೆ ಮೀಸಲಾಗಲಿದೆ.

### ಸೇವೆ ವಿಸ್ತರಣೆ

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರ ಸೇವೆಯನ್ನು 65 ವರ್ಷದವರೆಗೂ ಬಳಸಿಕೊಳ್ಳುವ ಪ್ರಸ್ತಾವನೆಗೆ ಸಂಪುಟ ಒಪ್ಪಿಗೆ ನೀಡಿದೆ. ನಿವೃತ್ತಿ ನಂತರದ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲಿದೆ.

### ನೈಸ್ ಚರ್ಚೆ ಇಲ್ಲ

ನೈಸ್ ಅಕ್ರಮದ ಬಗ್ಗೆ ಸದನ ಸಮಿತಿ ನೀಡಿದ ವರದಿ ಇಂದಿನ ಸಚಿವ ಸಂಪುಟದ ಸಭೆಯಲ್ಲಿ ಚರ್ಚೆಗೆ ಬರಲಿಲ್ಲ. ಈ ವರದಿ ಅನ್ವಯ ಸರ್ಕಾರ ಸಿಬಿಐ ತನಿಖೆಗೆ ವಹಿಸುವ ನಿರೀಕ್ಷೆ ಇತ್ತು.

ವರದಿಯನ್ನು ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಪರಿಶೀಲನೆ ನಡೆಸಲಿದೆ. ನಂತರ ಅದನ್ನು ಸಚಿವ ಸಂಪುಟದ ಮುಂದೆ ತರಲಾಗುವುದು ಎಂದು ಕಾನೂನು ಸಚಿವ ಜಯಚಂದ್ರ ಸುದ್ದಿಗಾರರಿಗೆ ತಿಳಿಸಿದರು. ಮೈಸೂರು ಮಿನರಲ್ಸ್ ಅಕ್ರಮದ ಕುರಿತ ಲೋಕಾಯುಕ್ತ ವರದಿಯ ಪರಿಶೀಲನೆಯನ್ನು ಸಂಪುಟ ಮುಂದಕ್ಕೆ ಹಾಕಿದೆ.

Page 6 8/12/16 ವಿಜಯವಾಣಿ

# ಹೈಕೋರ್ಟ್ ಸಿಬ್ಬಂದಿಗೆ ಕೇಂದ್ರ ಸರ್ಕಾರಿ ನೌಕರರ ವೇತನ ಶ್ರೇಣಿ ಇಲ್ಲ

## ಪ್ರಸ್ತಾವನೆ ತಿರಸ್ಕರಿಸಿದ ಸಚಿವ ಸಂಪುಟ ಸಭೆ | ಭದ್ರಾವತಿ ಕಾಗದ ಕಾರ್ಖಾನೆ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕಾರಿ ಮತ್ತು ನೌಕರರಿಗೆ ಕೇಂದ್ರ ಸರ್ಕಾರದ ನೌಕರರ ವೇತನ ಶ್ರೇಣಿಯನ್ನು ನೀಡಬೇಕೆಂಬ ಪ್ರಸ್ತಾವನೆಯನ್ನು ಸಚಿವ ಸಂಪುಟ ತಿರಸ್ಕರಿಸಿದೆ.

ಬುಧವಾರ ವಿಧಾನಸೌಧದಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಕಾನೂನು ಸಚಿವ ಟಿ.ಬಿ.ಜಯಚಂದ್ರ ತಿಳಿಸಿದರು.



ಬೇಡಿಕೆಗೆ ಸಚಿವ ಸಂಪುಟ ಒಪ್ಪಿಗೆ ಸೂಚಿಸಿಲ್ಲ. ಈ ಸಂಬಂಧ ಅಡ್ವೋಕೇಟ್ ಜನರಲ್ ವರದಿ ಸಲ್ಲಿಸಿ ಈಗಾಗಲೇ ರಾಜ್ಯ ಸರ್ಕಾರದ ವೇತನ ವ್ಯಾಪ್ತಿಯಲ್ಲಿಯೇ ನ್ಯಾಯಾಂಗ ಇಲಾಖೆ ನೌಕರರು ಬರುತ್ತಾರೆ. ಹೀಗಾಗಿ ಅವರಿಗೆ ಪ್ರತ್ಯೇಕ ವೇತನ ಶ್ರೇಣಿ ನೀಡಬೇಕಾದ ಅಗತ್ಯವಿಲ್ಲ ಎಂದು ವರದಿಯಲ್ಲಿ ಹೇಳಿದ್ದರು. ಈಗ ಅದೇ ವರದಿಯನ್ನು ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಲಾಗುವುದು ಎಂದು ಸಚಿವರು ತಿಳಿಸಿದರು.

**ಕಾರ್ಮಿಕರಿಗೆ ಸ್ವಯಂ ನಿವೃತ್ತಿ:** ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸಲಾಗಿದೆ. ಕಾರ್ಖಾನೆಯ 2200 ನೌಕರರಿಗೆ ವಿಆರ್‌ಎಸ್ ಪಡೆಯಲು 396.72 ಕೋಟಿ ರೂ. ಆರ್ಥಿಕ ಸಹಾಯ ನೀಡಲಾಗುವುದು. ಖಾಸಗಿ ಕಂಪನಿಗಳು ಈ ಕಾರ್ಖಾನೆಯನ್ನು ನಿರ್ವಹಣೆಗೆ ಪಡೆಯಲು ಮುಂದೆ ಬಾರದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಜಯಚಂದ್ರ ತಿಳಿಸಿದ್ದಾರೆ. ಈ ಮೂಲಕ ಕಾರ್ಮಿಕರ ಬಹು ದಿನಗಳ ಬೇಡಿಕೆಯನ್ನು ಸರ್ಕಾರ ಮಾನ್ಯ ಮಾಡಿದಂತಾಗಿದೆ.

**200 ಮೆ.ವಾ. ಘಟಕಕ್ಕೆ ಸಮ್ಮತಿ:** ಕಾವೇರಿ ತೀರದ ಶಿವನಸಮುದ್ರದ ಬಳಿ 200 ಮೆ.ವಾ. ವಿದ್ಯುತ್ ಉತ್ಪಾದನೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುಚ್ಛಕ್ತಿ ನಿಗಮಕ್ಕೆ ಅನುಮತಿ ನೀಡಲಾಗಿದೆ. ಈ ಯೋಜನೆಯ ಕುರಿತು ಕಾವೇರಿ ಮೇಲುಸ್ತುವಾರಿ ಸಮಿತಿ ಮತ್ತು ತಮಿಳುನಾಡು ರಾಜ್ಯಕ್ಕೆ ಮಾಹಿತಿ ನೀಡಲು ಅನುಮತಿ ನೀಡಲಾಗಿದೆ.

### ಹೆಚ್ಚಿನ ಮಾಹಿತಿ ಕೋರಿಕೆ

ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ನಡೆದಿದೆ ಎನ್ನಲಾಗಿರುವ ಅಕ್ರಮದ ಕುರಿತು ಲೋಕಾಯುಕ್ತರು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ತನಿಖಾ ವರದಿಯನ್ನು ಸಂಪುಟ ಸಭೆಯಲ್ಲಿ ಒಪ್ಪಿಕೊಳ್ಳದೇ ವಿಷಯವನ್ನು ಮುಂದೂಡುವ ನಿರ್ಧಾರ ಕೈಗೊಳ್ಳಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಗಣಿ ಇಲಾಖೆಯಿಂದ ಹೆಚ್ಚಿನ ಮಾಹಿತಿ ಕೋರಲಾಗಿದೆ. ಮಾಹಿತಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳುವ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿದುಬಂದಿದೆ.

### ಪ್ರಮುಖ ನಿರ್ಣಯಗಳು

» ಬೆಂಗಳೂರಿನಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಎಂಬ ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆ, ಆರಂಭದಲ್ಲಿ 150 ಸೀಟುಗಳು ಲಭ್ಯ, ಕಟ್ಟಡ ನಿರ್ಮಾಣಕ್ಕೆ 180 ಕೋಟಿ ರೂ.

» ವಕೀಲರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ದ್ವಿಗುಣಗೊಳಿಸಲು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ವಿಧೇಯಕಕ್ಕೆ ತಿದ್ದುಪಡಿ ತರಲು ನಿರ್ಧಾರ.

### ರಾಜ್ಯಪಾಲರಿಗೆ ಮರು ಪ್ರಸ್ತಾವನೆ

**ಬೆಂಗಳೂರು:** ಸಿಎ ನಿವೇಶನ ನಿಯಮ ತಿದ್ದುಪಡಿ ಕುರಿತಂತೆ ರಾಜ್ಯಪಾಲರಿಗೆ ಮರು ಪ್ರಸ್ತಾವನೆ ಕಳುಹಿಸಲು ಸಚಿವ ಸಂಪುಟ ನಿರ್ಧರಿಸಿದೆ. ಈ ಹಿಂದೆ ರಾಜ್ಯಪಾಲರು ರಾಜ್ಯ ಸರ್ಕಾರದ ತಿದ್ದುಪಡಿ ನಿಯಮವನ್ನು ತಿರಸ್ಕರಿಸಿದ್ದರು. ಈ ಸಂಬಂಧ ಸರ್ಕಾರದ ವಿರುದ್ಧ ಪ್ರತಿಪಕ್ಷ ಮುಖಂಡರು ರಾಜ್ಯಪಾಲರನ್ನು ಭೇಟಿ ಮಾಡಿ ತಿದ್ದುಪಡಿ ವಿಧೇಯಕ ಒಪ್ಪದಂತೆ ಮನವಿ ಮಾಡಿದ್ದರು. ರಾಜ್ಯಪಾಲರ ನಡೆಯಿಂದ ಸರ್ಕಾರಕ್ಕೆ ತೀವ್ರ ಮುಖಭಂಗವಾಗಿತ್ತು.

ಖಾಸಗಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ರಚನೆ ಮಾಡುವ ಬಡಾವಣೆಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಮೀಸಲಿರಿಸುವ ನಿವೇಶನದ ಒಟ್ಟು ವಿಸ್ತೀರ್ಣದ ಪ್ರಮಾಣದಲ್ಲಿ ಏಕ ರೂಪತೆ ತರಲಾಗಿದೆ. ಈ ಹಿಂದೆ ಖಾಸಗಿ ಬಡಾವಣೆಗೆ ಶೇ.10 ಸಿಎ ನಿವೇಶನ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ಬಡಾವಣೆಗೆ ಶೇ.15 ಸಿಎ ನಿವೇಶನವನ್ನು ಮೀಸಲಿರಿಸಬೇಕೆಂಬ ನಿಯಮ ಇತ್ತು. ಆದರೆ ಅದಕ್ಕೆ ರಾಜ್ಯಪಾಲರು ವಿರೋಧ ವ್ಯಕ್ತಪಡಿಸಿದ್ದರು. ಆ ಕಾರಣಕ್ಕಾಗಿ ಈ ಬದಲಾವಣೆ ತರಲಾಗಿದೆ. ಖಾಸಗಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ಬಡಾವಣೆಗಳು ಇನ್ನು ಮುಂದೆ ಶೇ.10 ಸಿಎ ನಿವೇಶನ ಮೀಸಲಿರಿಸಿದರೆ ಸಾಕು ಎಂದು ಜಯಚಂದ್ರ ಸಚಿವ ಸಂಪುಟ ಸಭೆ ಬಳಿಕ ವಿವರಿಸಿದರು.

**ಇಲಾಖೆಯಿಂದ ವಿವರಣೆ:** ನೈಸ್ ವರದಿಯನ್ನು ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರಿಗೆ ಕಳುಹಿಸಲಾಗಿದೆ. ಆ ವರದಿ ಅನುಷ್ಠಾನದ ಬಗ್ಗೆ ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರು ಉನ್ನತ ಮಟ್ಟದ ಸಮಿತಿ ಅಧ್ಯಕ್ಷರಾಗಿರುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ವರದಿ ಸಲ್ಲಿಸುತ್ತಾರೆ. ಆ ವರದಿ ಆಧರಿಸಿ ಮುಖ್ಯ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಜಯಚಂದ್ರ ತಿಳಿಸಿದರು.

### ಭೀಮಗಡ ವನ್ಯಧಾಮ ಸುರಕ್ಷತೆಗೆ ಕುತ್ತು: ವನ್ಯಜೀವಿ ಪ್ರಿಯರ ಆತಂಕ

# ಅರಣ್ಯದಲ್ಲಿ ವಿದ್ಯುತ್ ಕಂಬ ಅಳವಡಿಕೆ

ಪ್ರಜಾವಾಣಿ ವಾರ್ತೆ





ಹೆಮ್ಮಡಗಾ ಗ್ರಾಮದಿಂದ ದೇಗಾಂವ ಗ್ರಾಮದವರೆಗೆ ನೂರಕ್ಕೂ ಹೆಚ್ಚು ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದೆ (ಎಡಚಿತ್ರ) ಭೀಮಗಡ ವನ್ಯಧಾಮದ ಅಬನಾಳಿ ಕ್ರಾಸ್‌ನಿಂದ ಜಾಮಗಾಂವ್ ಗ್ರಾಮಕ್ಕೆ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ

ಬೆಂಗಳೂರು: ಭೀಮಗಡ ವನ್ಯಧಾಮ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ನೂರಕ್ಕೂ ಹೆಚ್ಚು ಕಂಬಗಳನ್ನು ಅನಧಿಕೃತವಾಗಿ ಅಳವಡಿಸಿರುವ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಭೀಮಗಡ ವನ್ಯಧಾಮ ವ್ಯಾಪ್ತಿಯ ಶಿರೋಲಿ ಗ್ರಾಮ ಪಂಚಾಯಿತಿ ಸರಹದ್ದಿನ ಹೆಮ್ಮಡಗಾ, ದೇಗಾಂವ, ಮೆಂಡಿಲ್, ಹೋಲ್ದಾ ಹಾಗೂ ಕೃಷ್ಣಾಪುರ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ನಿರ್ಧರಿಸಿದ ಹೆಸ್ಕಾಂ, ಪ್ರಥಮ ಹಂತದಲ್ಲಿ ಹೆಮ್ಮಡಗಾ ಗ್ರಾಮದಿಂದ ದೇಗಾಂವ ಗ್ರಾಮದವರೆಗೆ ನೂರಕ್ಕೂ ಹೆಚ್ಚು ವಿದ್ಯುತ್ ಕಂಬಗಳನ್ನು ಅಳವಡಿಸಿದೆ.

ವನ್ಯಧಾಮ ವ್ಯಾಪ್ತಿಯಲ್ಲಿ ಈ ಕಾಮಗಾರಿ ನಡೆಸಿರುವ ಹೆಸ್ಕಾಂ, ಅರಣ್ಯ ಇಲಾಖೆ, ರಾಜ್ಯ ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮತಿಯನ್ನೇ ಪಡೆದಿಲ್ಲ ಎಂದು ತಿಳಿದುಬಂದಿದೆ.

ವಿದ್ಯುತ್ ಕಂಬಗಳನ್ನು ಅಳವಡಿಸುವ ಸಮಯದಲ್ಲಿ ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗಳಿಗೆ ಪರಿವರ್ತಿಸಿರುವ ಹೆಸ್ಕಾಂ, ಅರಣ್ಯ ಸಂರಕ್ಷಣಾ ಕಾಯ್ದೆ-1980 ಹಾಗೂ ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ನಿಯಮಾವಳಿ ಉಲ್ಲಂಘಿಸಿದೆ. ಅಲ್ಲದೆ, ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶಗಳನ್ನೂ ನಿರ್ಲಕ್ಷಿಸಲಾಗಿದೆ ಎಂದು ವನ್ಯಜೀವಿ ಪ್ರಿಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವನ್ಯಧಾಮ ವ್ಯಾಪ್ತಿಯ ಅಬನಾಳಿ ಕ್ರಾಸ್‌ನಿಂದ ಜಾಮಗಾಂವ್ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಶಿರೋಲಿ ಗ್ರಾಮ ಪಂಚಾಯಿತಿ ಅಬನಾಳಿ ಕ್ರಾಸ್‌ನಿಂದ ಸುಮಾರು ನೂರು ಮೀಟರ್ ವ್ಯಾಪ್ತಿಯಲ್ಲಿ ಮಣ್ಣಿನ ರಸ್ತೆಯನ್ನು ಜಲ್ಲಿ ಕಲ್ಲು ಹಾಕಿ ಅಭಿವೃದ್ಧಿಪಡಿಸುತ್ತಿದ್ದು ಈ ಕಾಮಗಾರಿಗೂ ಅಗತ್ಯ ಅನುಮತಿಯನ್ನು ಪಡೆದಿಲ್ಲ ಎಂದು ದೂರಲಾಗಿದೆ.

**ಶಿಸ್ತು ಕ್ರಮಕ್ಕೆ ಆಗ್ರಹ:** ನೂರಕ್ಕೂ ಹೆಚ್ಚು ವಿದ್ಯುತ್ ಕಂಬಗಳನ್ನು ಅಳವಡಿಸುವುದು ಒಂದೇ ದಿನದಲ್ಲಿ ಮಾಡಬಹುದಾದ ಕಾಮಗಾರಿಯಲ್ಲ. ಇಷ್ಟೊಂದು ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದರೂ ಅವುಗಳನ್ನು ತಡೆಯಲು ವಿಫಲರಾಗಿರುವ ಭೀಮಗಡ ವನ್ಯಜೀವಿ ವಲಯ ಅರಣ್ಯಾಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ವನ್ಯಜೀವಿ ಪ್ರಿಯರು ಆಗ್ರಹಿಸಿದ್ದಾರೆ. ಹೆಸ್ಕಾಂ ಹಾಗೂ ಶಿರೋಲಿ ಗ್ರಾಮ ಪಂಚಾಯಿತಿ ವಿರುದ್ಧ ವನ್ಯಜೀವಿ ಮಂಡಳಿಗೆ ದೂರು ನೀಡಲು ಅವರು ನಿರ್ಧರಿಸಿದ್ದಾರೆ.

---

# ಯುನಿಟ್‌ಗೆ ₹1.40 ಏರಿಕೆಗೆ ಪ್ರಸ್ತಾವನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬರದ ಬರೆ ನಡುವೆ ವಿದ್ಯುತ್ ದುಬಾರಿ ಆಗುವ ದಿನಗಳು ಹತ್ತಿರ ಬರುತ್ತಿವೆ. ಪ್ರತಿ ಯುನಿಟ್‌ಗೆ 1.40 ರೂ. ಏರಿಕೆ ಮಾಡಬೇಕು ಎಂದು ಎಸ್ಕಾಂಗಳು ಕರ್ನಾಟಕ ವಿದ್ಯುತ್‌ಶಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಎಸ್ಕಾಂಗಳು ಈ ತನಕ ಸಲ್ಲಿಸಿದ ಬೆಲೆ ಏರಿಕೆ ಪ್ರಸ್ತಾವದಲ್ಲಿ ಇದು ಅತಿ ದುಬಾರಿ ಆಗಿದೆ.

ಬರ ಹಿನ್ನೆಲೆಯಲ್ಲಿ ಶರಾವತಿ ಸೇರಿ ಜಲ ವಿದ್ಯುತ್ ಯೋಜನೆಗಳಿಗೆ ನೀರಿನ ಕೊರತೆ ಎದುರಾಗಿದ್ದು, ವಿದ್ಯುತ್ ಖರೀದಿ ಮಾಡುವುದು ಅನಿವಾರ್ಯವಾದ್ದರಿಂದ ವಿದ್ಯುತ್ ಬೆಲೆ ಏರಿಕೆ ಅನಿವಾರ್ಯ ಎಂದು ಎಸ್ಕಾಂಗಳು ಪ್ರತಿಪಾದಿಸಿವೆ.

ಕಳೆದ ವರ್ಷ ಪ್ರತಿ ಯುನಿಟ್‌ಗೆ 1.02 ರೂ. ಏರಿಕೆ ಮಾಡುವಂತೆ ಎಸ್ಕಾಂಗಳು ಕೇಳಿದ್ದವು. ಆದರೆ, ಕೆಇಆರ್‌ಸಿ ಪ್ರತಿ ಯುನಿಟ್‌ಗೆ 30 ಪೈಸೆ ಏರಿಕೆಗೆ ಅವಕಾಶ ಮಾಡಿಕೊಟ್ಟಿತ್ತು. 2014ರಲ್ಲಿ ಎಸ್ಕಾಂಗಳು ಪ್ರತಿ ಯುನಿಟ್‌ಗೆ 80 ಪೈಸೆ ಹೆಚ್ಚಳ ಕೇಳಿದ್ದರೂ ಯುನಿಟ್‌ಗೆ 13 ಪೈಸೆ ಏರಿಕೆ ಮಾಡಲಾಗಿತ್ತು. ಈ ಬಾರಿ 1.40 ರೂ. ಏರಿಕೆ ಮಾಡಲು ಕೇಳಿರುವುದರಿಂದ ಬೆಲೆ ಏರಿಕೆ ತುಸು ಹೆಚ್ಚು ಆಗಬಹುದು ಎನ್ನಲಾಗಿದೆ. ಎಸ್ಕಾಂಗಳ ಪ್ರಸ್ತಾವನೆ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಕೆಇಆರ್‌ಸಿ ಬೆಲೆ ಏರಿಕೆ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ತಾಲೀಮು ಪ್ರಾರಂಭಿಸಿದೆ. ಎಸ್ಕಾಂಗಳು ಕೇಳಿರುವ ಬೆಲೆ ಏರಿಕೆ ಬಗ್ಗೆ ಜನವರಿಯಲ್ಲಿ ಸಾರ್ವಜನಿಕ ಅದಾಲತ್ ನಡೆಸಲು ಮುಂದಾಗಿದೆ. ಸಾರ್ವಜನಿಕ ಅಹವಾಲು ಆಲಿಸಿದ ಬಳಿಕ ಮಾರ್ಚ್ ಅಂತ್ಯದೊಳಗಾಗಿ ಕೆಇಆರ್‌ಸಿ, ಪ್ರತಿ ಯುನಿಟ್‌ಗೆ ಎಷ್ಟು ಬೆಲೆ ಏರಿಕೆ ಮಾಡಬೇಕು ಎನ್ನುವುದನ್ನು ತನ್ನ ತೀರ್ಪಿನಲ್ಲಿ ಪ್ರಕಟಿಸಲಿದೆ. ಹೊಸ ದರ ಏಪ್ರಿಲ್‌ನಿಂದ ಜಾರಿಗೆ ಬರಲಿದೆ.

**ಯಾವಾಗ ಎಷ್ಟೆಷ್ಟು ಬೇಡಿಕೆ- ಏರಿಕೆ?**

| ವರ್ಷ | ಬೇಡಿಕೆ | ಅನುಮೋದನೆ |
|---|---|---|
| 2012 | 73 ಪೈಸೆ | 13 ಪೈಸೆ |
| 2013 | 70 ಪೈಸೆ | 23 ಪೈಸೆ |
| 2014 | 66 ಪೈಸೆ | 35 ಪೈಸೆ |
| 2015 | 80 ಪೈಸೆ | 13 ಪೈಸೆ |
| 2016 | 102 ಪೈಸೆ | 30 ಪೈಸೆ |